

ಕೃಷ್ಣ ಪಂಚಕ ಮಲ್ಲಾರಿ ಪ್ರಸ್ತುತಿಯು ಕುಲಶೇಖರ ರಾಜನ 'ಮುಕುಂದಮಾಲಾ' ಶ್ಲೋಕಗಳನ್ನು ಆಧರಿಸಿ ರೂಪಿಸಿದ್ದು. ಒಂದೆರಡು ಶ್ಲೋಕಗಳನ್ನು ಆಯ್ಕೆ ಮಾಡಿ ಅದನ್ನು ನೃತ್ಯಕ್ಕೆ ಅಳವಡಿಸಬೇಕಾದರೆ ಸುಮಾರು ನೂರು ಶ್ಲೋಕಗಳನ್ನು ಓದಿ ಮನನ ಮಾಡಿಕೊಂಡು, ಅದರ ಸತ್ವವನ್ನು ನೃತ್ಯಕ್ಕೆ ಅಳವಡಿಸಿಕೊಳ್ಳಬೇಕು. ಇಡೀ ಭಾಗವತ ಓದಿದ ಬಳಿಕ ನೃತ್ಯಕ್ಕೆ ಯಾವ ಸನ್ನಿವೇಶ ಸೂಕ್ತವೆಂದು ಆಯ್ಕೆ ಮಾಡಬಹುದು. ಕೇವಲ ಮೇಲ್ಮೈ ಓದು ಅಷ್ಟೆ ಸಾಕಾಗುವುದಿಲ್ಲ. ಅವುಗಳಿಗೆ ಬರೆದಿರುವ ಭಾಷ್ಯಗಳನ್ನು ಓದಿ, ಅನ್ವಯಾರ್ಥಗಳನ್ನು ಮನನ ಮಾಡಿಕೊಂಡು, ರೂಪಕಗಳನ್ನು ಹೇಗೆ ಗ್ರಹಿಸಲಾಗಿದೆ ಎಂದು ಪೂರಕ ಗ್ರಂಥಗಳನ್ನು ಕೂಡ ಓದಿಕೊಳ್ಳಬೇಕಾಗುತ್ತದೆ. ಪುಣ್ಯಕ್ಕೆ ನನ್ನ ಬಾಲ್ಯದಲ್ಲಿ 'ನಾರಾಯಣೀಯಂ', 'ಭಾಗವತಂ', 'ಉಪನಿಷದ್' ಮುಂತಾದ ಪುಸ್ತಕಗಳನ್ನು ಓದುವುದನ್ನು ಅಮ್ಮ ಕಡ್ಡಾಯಗೊಳಿಸಿದ್ದರಿಂದ ನನಗೆ ಈ ನೃತ್ಯ ಕಲ್ಪನೆಗಳಿಗೆ ಪೂರಕವಾದ ವಿಚಾರಗಳನ್ನು ಗ್ರಹಿಸುವುದು ಸುಲಭವಾಯಿತು. ಹಾಗೆಂದು ನಾನು ಕೇವಲ ಮಹಾಕಾವ್ಯ, ಪುರಾಣ, ಉಪನಿಷತ್ತುಗಳನ್ನು ಆಧರಿಸಿದ ಪ್ರಸ್ತುತಿಗಳಿಗಷ್ಟೇ ಕೊರಿಯೊಗ್ರಫಿ ಮಾಡಿಲ್ಲ. ಹಳೆಯ ಜ್ಞಾನದ ತಳಹದಿಯ ಮೇಲೆ ಪ್ರಸ್ತುತ ಕಾಲಮಾನದ ವಿಚಾರಗಳಿಗೆ ಪ್ರತಿಕ್ರಿಯಿಸುವ ಪರಿಕಲ್ಪನೆಗಳಿಗೂ ಕೊರಿಯೊಗ್ರಫಿ ಮಾಡಿರುವೆ.

**◆ ಅಂದರೆ, ಕಲಾವಿದರು ಸಮಕಾಲೀನ ಸಮಸ್ಯೆಗಳಿಗೆ ಸ್ಪಂದಿಸುವುದು ಸಾಧ್ಯವೇ?**